**<u>ದಿನಾಂಕಃ 21-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .</u>**

**<u>ಮುಂದುವರೆದ ಪಾಟೀ ಸವಾಲುಃ 7(ಎ) ರಿಂದ (ಡಿ)ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಸ್.ಕೆ ವಕೀಲರಿಂದಃ</u>**

ನಾನು ಕೆ.ಇ.ಬಿ ಯ ನಿವೃತ್ತ ನೌಕರನಾಗಿದ್ದೇನೆ ಎಂದರೆ ಸರಿ. ನಾನು ಸದರಿ ಸೇವೆಯಲ್ಲಿ ನೇಮಕಗೊಳ್ಳುವ ಸಮಯದಲ್ಲಿ ನನಗೆ ಸದರಿ ಇಲಾಖೆಯವರು ನೇಮಕಾತಿ ಆದೇಶವನ್ನು ನೀಡಿದ್ದಾರೆ ಎಂದರೆ ಸರಿ. ಸದರಿ ಚಂದ್ರಪ್ಪ ದತ್ತಕಕ್ಕೆ ಹೋಗುವ ಪೂರ್ವದಲ್ಲಿಯೇ ಗ್ಯಾಂಗ್ ಮೆನ್ ಎಂದು ಸೇವೆ ಸಲ್ಲಿಸುತ್ತಿದ್ದ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿದ್ದೇನೆ . ನಾನು ಸಲ್ಲಿಸಿರುವ ವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗವನ್ನು ನಾನು ಶೇತ್ಕಿ ಎಂದು ನಮೂದಿಸಿದ್ದೇನೆ . ನಾನು ಸೇವೆಯಿಂದ ನಿವೃತ್ತನಾಗಿದ್ದೇನೆ ಎನ್ನುವ ಕಾರಣಕ್ಕಾಗಿ ನನ್ನ ವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗವನ್ನು ನಾನು ಶೇತ್ಕಿ ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸದರಿ ಪೋಮೆಪ್ಪ ಸೇವೆಯಿಂದ ನಿವೃತ್ತಿ ಆಗಿದ್ದರು ಎನ್ನುವ ಕಾರಣಕ್ಕಾಗಿ

ನಿ.ಪಿ–6 ರ ನೊಂದಣಿ ದತ್ತಕ ಪತ್ರದಲ್ಲಿ ತನ್ನ ವೃತ್ತಿಯನ್ನು ಶೇತ್ಕಿ ಎಂದು ತೋರಿಸಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸದರಿ ಪೋಮೆಪ್ಪ ಯಾವುದೇ ಸೇವೆಯಿಂದ ನಿವೃತ್ತನಾಗಿರಲಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ–7 ರ Pension Payment order ನಲ್ಲಿ ಸದರಿ ಚೆಂದ್ಯಪ್ಪನ ತಂದೆಯ ಹೆಸರನ್ನು ಪೋಮೆಪ್ಪ ಎಂದು ಬರೆಯಲಾಗಿದೆ ಆದರೆ ಅದು ದತ್ತಕ ಎಂದು ನಮೂದು ಆಗಿರುವುದಿಲ್ಲ. ಸದರಿ ಪೋಮೆಪ್ಪ ಅನಕ್ಷರಸ್ಥರಾಗಿದ್ದರು . ನೊಂದಣಿ ದತ್ತಕ ಪತ್ರ (ನಿ.ಪಿ–6) ರ ಮೂಲ ಪ್ರತಿ ಕಳೆದು ಹೋಗಿರುತ್ತದೆ .

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/–

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.